

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–11–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ ـ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ إِيَّاكَ نَعْبُدُ وَإِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಸಹಾಬರ ಹಿಂದಿನ ಸ್ಥಿತಿ ಮತ್ತು ಇಸ್ಲಾಮ್ ಸ್ವೀಕಾರದ ನಂತರ ಅವರಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಉಮರ್(ರ)ರ ಇಸ್ಲಾಂ ಸ್ವೀಕಾರದ ಘಟನೆಯನ್ನು ಉದಾಹರಣೆಯಾಗಿ ಮುಂದಿರಿಸುತ್ತಾ ಹೇಳುತ್ತಾರೆ: ಹಝ್ರತ್ ಉಮರ್(ರ) ತನ್ನ ಸಹೋದರಿ ಮತ್ತು ಬಾವನಿಂದ ಪವಿತ್ರ ಖುರ್‌ಆನ್ ವಚನಗಳನ್ನು ಆಲಿಸಿದಾಗ ಅತ್ತುಬಿಟ್ಟರು. ಅವರು ಓಡುತ್ತಾ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದರು. ಅವರು ಹೀಗೆ ಹೇಳಿದರು: ನಿಮ್ಮನ್ನು ವಧಿಸಲಿಕ್ಕಾಗಿ ನಾನು ಮನೆಯಿಂದ ಹೊರಟಿದ್ದೆ. ಆದರೆ ಈಗ ನಾನು ಸ್ವತಃ ಬೇಟೆಯಾಗಿದ್ದೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸಹಾಬರು ಮುಂಚೆ ಮದ್ಯಪಾನ ಮಾಡುತ್ತಿದ್ದರು, ಪರಸ್ಪರ ಜಗಳಮಾಡುತ್ತಿದ್ದರು. ಆದರೆ ಅವರು ಹಝ್ರತ್ ಪೈಗಂಬರ್(ಸ)ರನ್ನು ನಂಬಿದ ನಂತರ ಧರ್ಮಕ್ಕಾಗಿ ಧೈರ್ಯ ಮತ್ತು ಪ್ರಯತ್ನದಿಂದ ಕೆಲಸ ಮಾಡಿದಾಗ ಅವರು ಸ್ವತಃ ಉನ್ನತ ಪದವಿಗಳನ್ನು ತಲುಪಿದರು. ಮಾತ್ರವಲ್ಲ, ಇತರರನ್ನು ಉನ್ನತ ಪದವಿಗಳಿಗೆ ತಲುಪಿಸಲು ಕಾರಣಕರ್ತರಾದರು.

ಹಝ್ರತ್ ಉಮರ್(ರ)ರ ದೇವಭಯದ ಸ್ಥಿತಿ ಹೇಗಿತ್ತು ಎಂದರೆ, ಹಝ್ರತ್ ಉಮರ್(ರ) ಹೇಳುತ್ತಾರೆ: ಯೂಫ್ರಟೀಸ್ ನದಿಯ ದಡದಲ್ಲಿ ಒಂದು ಆಡು ಸತ್ತರೆ ಕೂಡ, ಅಲ್ಲಾಹನು ಖಿಯಾಮತ್ ದಿನದಂದು ಅದರ ಬಗ್ಗೆ ಪ್ರಶ್ನಿಸುವನು ಎಂಬ ಭಯ ನನಗಿದೆ.

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹೀಗೆ ಹೇಳುವುದಾಗಿ ನಾನು ಕೇಳಿದೆನು: ಎಲೈ ಉಮರಿಬ್ನು ಖತ್ತಾಬ್, ನೀನು ಖಂಡಿತವಾಗಿಯೂ ಅಲ್ಲಾಹನಿಗೆ ಹೆದರು. ಇಲ್ಲದಿದ್ದರೆ ಅವನು ನಿನ್ನನ್ನು ಶಿಕ್ಷಿಸುವನು.

ಹಝ್ರತ್ ಉಮರ್(ರ)ರ ಉಂಗುರದಲ್ಲಿ ಹೀಗೆ ಕೆತ್ತಲಾಗಿತ್ತು: ಉಪದೇಶಕನೆಂಬ ನೆಲೆಯಲ್ಲಿ ಮೃತ್ಯು ಸಾಕು.

ಅಬ್ದುಲ್ಲಾಹ್ ಬಿನ್ ಶಹ್‌ಝಾದ್ ಹೇಳುತ್ತಾರೆ: ಹಝ್ರತ್ ಉಮರ್(ರ) ಬಿಕ್ಕಿಬಿಕ್ಕಿ ಅಳುತ್ತಿರುವುದು ನನಗೆ ಕೇಳಿಸಿತು. ಆಗ ನಾನು ಕೊನೆಯ ಪಂಕ್ತಿಯಲ್ಲಿದ್ದೆ. ಅವರು ಹೀಗೆ ತಿಲಾವತ್ ಮಾಡುತ್ತಿದ್ದರು: **ಇನ್ನಮಾ ಅಶ್‌ಕೂ ಬಸ್ಸೀ ವ ಹುಝ್ನೀ ಇಲಲ್ಲಾಹ್**. ಎಂದರೆ, 'ನನ್ನ ದುಃಖವನ್ನೂ ನೋವನ್ನೂ ಅಲ್ಲಾಹನೊಡನೆ ಮಾತ್ರ ನಾನು ಹೇಳುತ್ತೇನೆ.' ಈ ವರದಿಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಹೇಳುತ್ತಾರೆ: ದೇವಸ್ಮರಣೆಯಲ್ಲಿ ಮುಳುಗಿರುವವರಿಗೆ ತಮ್ಮ ಮನೋವ್ಯಥೆಯನ್ನೂ ವ್ಯಾಕುಲವನ್ನೂ ನಿವೇದಿಸಲು ಮತ್ತು ಹೃದಯದ ಭಾರವನ್ನು ಹಗುರಗೊಳಿಸಲು ಅಲ್ಲಾಹನಲ್ಲದೆ ಬೇರೆ ಯಾರ ದರ್ಬಾರು ಸಿಗುವುದೇ ಇಲ್ಲ.

ಮುಂಚೆ ಸೇವೆ ಮಾಡುತ್ತಿದ್ದ ಮತ್ತು ತ್ಯಾಗಮಾಡುತ್ತಿದ್ದ ಹಿರಿಯರ ಬಗ್ಗೆ ಹಝ್ರತ್ ಉಮರ್(ರ) ಬಹಳ ಕಾಳಜಿ ವಹಿಸುತ್ತಿದ್ದರು. ಒಮ್ಮೆ ಬೆಲೆಬಾಳುವ ಕೆಲವು ಹೊದಿಕೆಗಳು ಬಂದಾಗ ಅವುಗಳನ್ನು ಹಝ್ರತ್ ಉಮರ್(ರ) ವಿತರಿಸಿದರು. ಹಝ್ರತ್ ಉಮ್ಮೇ ಸಲೀತ್‌ರು ಸಹ ಅದಕ್ಕೆ ಅರ್ಹರು ಎಂದು ಪ್ರಸ್ತಾಪಿಸುತ್ತಾ ಅವರು ಹೀಗೆ ಹೇಳಿದರು: ಉಹದ್ ಯುದ್ಧದ ದಿನಗಳಲ್ಲಿ ಉಮ್ಮೆ ಸಲೀತ್ ನಮಗೆ ಚರ್ಮದ ಚೀಲಗಳಲ್ಲಿ ನೀರನ್ನು ಎತ್ತಿ ತರುತ್ತಿದ್ದರು.

ಒಬ್ಬಳು ಮಹಿಳೆ ತನ್ನ ಪತಿಯ ಮರಣದ ನಂತರ ಅನುಭವಿಸುತ್ತಿದ್ದ ಕಷ್ಟತೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದಳು: ನಾನು ಖುಫ್ಫಾಫ್ ಬಿನ್ ಈಮಾ ಗ಼ಫ್ಫಾರಿಯ ಮಗಳಾಗಿರುವೆನು. ಅವರು ಹುದೈಬಿಯದಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದರು. ಇದನ್ನು ಕೇಳಿ ಹಝ್ರತ್ ಉಮರ್(ರ) ಅಲ್ಲೇ ನಿಂತರು. ಅವರು ಹೀಗೆ ಹೇಳಿದರು: ವಾಹ್! ಇದು ಬಹಳ ಸಮೀಪದ ಸಂಬಂಧವಾಗಿದೆ. ಅನಂತರ ಒಂದು ಗಟ್ಟಿಮುಟ್ಟಾದ ಒಂಟೆಯ ಮೇಲೆ ಧಾನ್ಯದ ಗೋಣಿಗಳನ್ನು ಇರಿಸಿದರು, ಇಡೀ ವರ್ಷಕ್ಕೆ ಬೇಕಾಗುವಷ್ಟು ಹಣ ಮತ್ತು ಬಟ್ಟೆಗಳನ್ನು ಇರಿಸಿದರು ಹಾಗೂ ಆ ಒಂಟೆಯ ಲಗಾಮನ್ನು ಆ ಯುವತಿಯ ಕೈಗೆ ಕೊಟ್ಟು ಹೀಗೆ ಹೇಳಿದರು: ಇದು ಮುಗಿಯುವಷ್ಟರಲ್ಲಿ ಅಲ್ಲಾಹನು ನಿನಗೆ ಇನ್ನೂ ಕೊಡುವನು.

ರಾತ್ರಿ ಸಮಯದಲ್ಲಿ ಹಝ್ರತ್ ಉಮರ್(ರ) ಹೊರಟು ಅನೇಕ ಮನೆಗಳಿಗೆ ಪ್ರವೇಶಿಸುವುದನ್ನು ಒಮ್ಮೆ ಹಝ್ರತ್ ತಲ್‌ಹ(ರ) ನೋಡಿದರು. ಮರುದಿನ ಬೆಳಿಗ್ಗೆ ಆ ಮನೆಗಳಲ್ಲಿ ಒಂದು ಮನೆಗೆ ಹಝ್ರತ್ ತಲ್‌ಹ(ರ) ಹೋದರು. ಅಲ್ಲಿ ಕುರುಡಿಯಾದ ಒಬ್ಬಳು ಮುದುಕಿ ಕುಳಿತಿದ್ದಳು. ಮುದುಕಿಯೊಡನೆ ಹಝ್ರತ್ ತಲ್‌ಹ(ರ) ಕೇಳಿದಾಗ ಅವಳು ಹೇಳಿದಳು: ರಾತ್ರಿ ಸಮಯದಲ್ಲಿ ನನ್ನ ಮನೆಗೆ ಬಂದ ವ್ಯಕ್ತಿಯು ಬಹಳ ದೀರ್ಘಕಾಲದಿಂದ ನನ್ನ ಸೇವೆ ಮಾಡುತ್ತಿದ್ದಾರೆ, ನನ್ನ ಕೆಲಸಗಳನ್ನು ಮಾಡುತ್ತಾರೆ ಮತ್ತು ನನ್ನನ್ನು ಶುಚಿಗೊಳಿಸುತ್ತಾರೆ.

ಸಿರಿಯದಿಂದ ಮರಳಿ ಬರುವಾಗ ಹಝ್ರತ್ ಉಮರ್(ರ) ಸಂಘದಿಂದ ಬೇರ್ಪಟ್ಟು ಜನರ ಸ್ಥಿತಿಗತಿಗಳನ್ನು ಅರಿಯಲಿಕ್ಕಾಗಿ ಹೊರಟರು. ಬಹಳ ದೂರದ ಒಂದು ಡೇರೆಯಲ್ಲಿದ್ದ ಒಬ್ಬಳು ವೃದ್ಧ ಸ್ತ್ರೀಯೊಡನೆ ಅವರ ಅವಸ್ಥೆಯ ಬಗ್ಗೆ ಕೇಳಿದಾಗ ಅವರು ಹೇಳಿದರು: ಅಲ್ಲಾಹನು ನನ್ನ ವತಿಯಿಂದ ಉಮರ್‌ರಿಗೆ ಪ್ರತಿಫಲ ಕೊಡದಿರಲಿ. ಅವರು ಖಲೀಫರಾದ ಅಂದಿನಿಂದ ನನಗೆ ಅವರ

ಕಡೆಯಿಂದ ಯಾವುದೇ ದಾನ ಸಿಕ್ಕಿಲ್ಲ. ಹಝ್ರತ್ ಉಮರ್(ರ) ಕೇಳಿದರು: ಉಮರ್‌ರಿಗೆ ನಿಮ್ಮ ಸ್ಥಿತಿಯ ಬಗ್ಗೆ ಹೇಗೆ ಗೊತ್ತಾಗುವುದು? ಆ ಮಹಿಳೆ ಹೇಳಿದರು: **ಸುಬ್‌ಹಾನಲ್ಲಾಹ್,** ಒಬ್ಬ ವ್ಯಕ್ತಿ ಜನರ ಅಧಿಕಾರಿಯಾಗಿದ್ದುಕೊಂಡು ಅವನ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಏನಾಗುತ್ತಿವೆ ಎಂದು ಅವನಿಗೆ ಗೊತ್ತಿಲ್ಲದೇ ಇರುವುದನ್ನು ನನಗೆ ಊಹಿಸಲು ಕೂಡ ಸಾಧ್ಯವಲ್ಲ. ಇದನ್ನು ಕೇಳಿ ಹಝ್ರತ್ ಉಮರ್(ರ) ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಅಕಟಾ, ಎಲೈ ಉಮರ್, ನಿನಗಿಂತ ಹೆಚ್ಚು ದೀನನ್ನು ಅರಿಯುವವರು ಎಷ್ಟೆಲ್ಲ ಜನರಿದ್ದಾರೆ. ಅನಂತರ ಆ ಮಹಿಳೆಯೊಡನೆ ಹೀಗೆ ಹೇಳಿದರು: ನೀನು ನಿನಗೆ ಉಂಟಾದ ದೌರ್ಜನ್ಯದ ಬದಲಾಗಿ ಸಿಗಬೇಕಾದ ಹಕ್ಕನ್ನು ಎಷ್ಟಕ್ಕೆ ಮಾರಾಟ ಮಾಡುತ್ತೀಯ? ನಾನು ಉಮರ್‌ರನ್ನು ನರಕದಿಂದ ರಕ್ಷಿಸಲು ಬಯಸುತ್ತೇನೆ. ಆ ಮಹಿಳೆ ಮೊದಲು ಇದನ್ನು ತಮಾಷೆಯೆಂದು ಭಾವಿಸಿದಳು ಅನಂತರ 25 ದೀನಾರ್‌ಗಳಿಗೆ ಒಪ್ಪಿದಳು. ಅದೇ ವೇಳೆ ಹಝ್ರತ್ ಅಲಿ(ರ) ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಅಲ್ಲಿಗೆ ಬಂದರು. ಅವರು ಹಝ್ರತ್ ಉಮರ್‌ರನ್ನು ಅಮೀರುಲ್ ಮುಅ್‌ಮಿನೀನ್ ಎಂದು ಸಂಬೋಧಿಸಿದರು. ಇದನ್ನು ಕೇಳಿ ಆ ಮಹಿಳೆ ಹೆದರಿದಳು. ನಿನ್ನ ಮೇಲೆ ಯಾವುದೇ ಅಪರಾಧವಿಲ್ಲವೆಂದು ಆಗ ಆ ಮಹಿಳೆಯೊಡನೆ ಹಝ್ರತ್ ಉಮರ್(ರ) ಹೇಳಿದರು. ಅನಂತರ ಹಝ್ರತ್ ಉಮರ್(ರ) ಹೀಗೆ ಒಂದು ಲಿಖಿತವನ್ನು ಬರೆದರು: "ಇಂದು ಉಮರ್, ಒಬ್ಬಳು ಸ್ತ್ರೀಯಿಂದ ಅವಳಿಗೆ ಉಂಟಾದ ಯಾತನೆಯ ಕಾರಣದಿಂದ ಅವಳಿಗೆ ಸಿಗಬೇಕಾದ ಹಕ್ಕನ್ನು 25 ದೀನಾರುಗಳಿಗೆ ಖರೀದಿ ಮಾಡಿದ್ದಾರೆ. ಇನ್ನು ಪರಲೋಕದಲ್ಲಿ ಅವಳು ಇದರ ಬಗ್ಗೆ ವಾದಿಸಿದರೆ, ಉಮರ್ ಅದರಿಂದ ಮುಕ್ತರಾಗಿರುವರು. ಅಲಿ ಮತ್ತು ಅಬ್ದುಲ್ಲಾಹ್ ಅದಕ್ಕೆ ಸಾಕ್ಷಿಗಳಾಗಿರುವರು." ಹಝ್ರತ್ ಉಮರ್(ರ) ಆ ಲಿಖಿತವನ್ನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಕೊಟ್ಟರು ಮತ್ತು ಹೀಗೆ ಹೇಳಿದರು: ನಾನು ನಿಮಗಿಂತ ಮುಂಚೆ ಮೃತಪಟ್ಟರೆ, ಈ ಲಿಖಿತವನ್ನು ನನ್ನ ಕಫನ್‌ನಲ್ಲಿ ಇರಿಸಿರಿ.

ಒಬ್ಬಳು ಯುವತಿಯ ಸತ್ಯಸಂಧತೆಯನ್ನು ಮಾತ್ರ ನೋಡಿಕೊಂಡು ಹಝ್ರತ್ ಉಮರ್(ರ) ತನ್ನ ಮಗನಾದ ಆಸಿಮ್‌ನ ವೈವಾಹಿಕ ಸಂಬಂಧವನ್ನು ಅವಳೊಂದಿಗೆ ಮಾಡಿಸಿದ್ದರು. ಹಝ್ರತ್ ಉಮರ್(ರ) ಮಾರುಕಟ್ಟೆಯಲ್ಲಿ ನಡೆಯುವಾಗ, ಒಬ್ಬ ವ್ಯಕ್ತಿಯೊಡನೆ ಮಾರ್ಗದಿಂದ ಸರಿಯಲಿಕ್ಕಾಗಿ ತನ್ನ ಬಡಿಗೆಯಿಂದ ಸನ್ನೆ ಮಾಡಿದಾಗ, ಹಗುರವಾಗಿ ಆ ಬಡಿಗೆ ಆ ವ್ಯಕ್ತಿಯ ಅಂಗಿಗೆ ತಗುಲಿತು. ಒಂದು ವರ್ಷದ ನಂತರ ಆ ವ್ಯಕ್ತಿಗೆ ಹಝ್ರತ್ ಉಮರ್(ರ) 600 ದಿರ್ಹಮ್ ಕೊಟ್ಟು, ಇದು ಅದರ ಪ್ರಾಯಶ್ಚಿತವಾಗಿದೆ ಎಂದು ಹೇಳಿದರು. ಯಾವುದೇ ವ್ಯಕ್ತಿಯ ನಾಗರಿಕ ಹಕ್ಕುಗಳ ಮೇಲೆ ದುಷ್ಪರಿಣಾಮ ಬೀರದ ರೀತಿಯಲ್ಲಿ ಮಾರುಕಟ್ಟೆಯ ವಸ್ತುಗಳ ಬೆಲೆ ಇರುವಂತೆ ಹಝ್ರತ್ ಉಮರ್(ರ) ನೋಡಿಕೊಳ್ಳುತ್ತಿದ್ದರು. ಒಬ್ಬ ವ್ಯಕ್ತಿ ತನ್ನ ಮಗಳ ಕುರಿತು ಹೇಳಿದರು: ಅವಳಿಂದ ಕಳೆದುಹೋದ ಜೀವಿತದಲ್ಲಿ ಒಂದು ತಪ್ಪಾಗಿತ್ತು. ಅದಕ್ಕೆ ಅಲ್ಲಾಹನು ನಿಶ್ಚಯಿಸಿದ್ದ ಒಂದು ಶಿಕ್ಷೆಯೂ ಅವಳಿಗೆ ಲಭಿಸಿತ್ತು. ಅವಳು ಆತ್ಮಹತ್ಯೆ ಮಾಡಲು ಕೂಡ ಪ್ರಯತ್ನಿಸಿದ್ದಳು. ಆದರೆ ಈಗ ಅವಳು ಪಶ್ಚಾತ್ತಾಪ ಮಾಡಿರುವಳು. ಹೀಗಿರುವಾಗ ಈ ಎಲ್ಲ ಸಂಗತಿಗಳನ್ನು ವಿವಾಹ ಸಂಬಂಧದ ಸಂದೇಶದೊಂದಿಗೆ ಬರುವವರೊಡನೆ ಹೇಳಬೇಕೇ? ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ಅದನ್ನು ಮರೆಸಿದ್ದಾನೆ. ನೀನು ಅದನ್ನು ಬಹಿರಂಗಪಡಿಸಲು ಇಚ್ಛಿಸುತ್ತಿದ್ದೀಯ. ಅಲ್ಲಾಹನಾಣೆ, ನೀನು ಹಾಗೆ ಮಾಡಿದರೆ, ಪಟ್ಟಣವಾಸಿಗಳಾದ ಎಲ್ಲರ ಮುಂದೆ ನಿನ್ನನ್ನು ನಾನು ಶಿಕ್ಷಿಸುವೆನು.

ಹಿಜರೀ 17ರಲ್ಲಿ ಹಝ್ರತ್ ಉಮರ್(ರ) ಮದೀನದಿಂದ ಸಿರಿಯಗೆ ಹೊರಟರು. ಸರಗ್ ಎಂಬ ಪ್ರದೇಶಕ್ಕೆ ತಲುಪಿದಾಗ, ರಮ್‌ಲ ಮತ್ತು ಬೈತುಲ್‌ಮಖ್‌ದಸಿನ ಮಾರ್ಗದಲ್ಲಿ ಆರು ಮೈಲುಗಳ ದೂರದಲ್ಲಿ ಅಮ್‌ವಾಸ್ ಎಂಬ ಹೆಸರಿನ ಒಂದು ಕಣಿವೆಯಲ್ಲಿ ಪ್ಲೇಗ್ ರೋಗ ಹರಡಿದೆ ಎಂದೂ ಆ ಸಾಂಕ್ರಾಮಿಕ ರೋಗವು ಪೂರ್ತಿ ಸಿರಿಯದಲ್ಲಿ ಹರಡಿದೆ ಎಂದೂ 25 ಸಾವಿರದಷ್ಟು ಜನರು ಸಾವನ್ನಪ್ಪಿರುವರು ಎಂದೂ ಅವರಿಗೆ ಮಾಹಿತಿ ಸಿಕ್ಕಿತು. ಹಝ್ರತ್ ಉಮರ್(ರ) ಈ ವೇಳೆಯಲ್ಲಿ ಹೇಗೆ ಜನರ ಬಗ್ಗೆ ಕಳವಳಗೊಂಡಿದ್ದರು ಎಂಬುದರ ಬಗ್ಗೆ ಸಹೀಹ್ ಬುಖಾರಿಯಲ್ಲಿ ವರದಿಯಿದೆ. "ಸಾಂಕ್ರಾಮಿಕ ರೋಗ ಹರಡಿರುವ ಸ್ಥಳಕ್ಕೆ ಹೋಗಬೇಡಿರಿ ಮತ್ತು ಯಾರಾದರೂ ಅಲ್ಲೇ ಇರುವುದಾದರೆ ಅಲ್ಲಿಂದ ಪರಾರಿಯಾಗಿ ಹೊರಡಲೂ ಬಾರದು" ಎಂಬ ಹಝ್ರತ್ ಪೈಗಂಬರ್(ಸ)ರ ಹದೀಸ್ ವಚನವನ್ನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮುಂದಿರಿಸಿದರು. ಈ ಸಾಂಕ್ರಾಮಿಕ ರೋಗದ ಕಾರಣದಿಂದ ಹಝ್ರತ್ ಅಬೂಉಬೈದ(ರ) ಮತ್ತು ಸಿರಿಯದಲ್ಲಿದ್ದ ಅವರ ಪ್ರತಿನಿಧಿಯಾದ ಹಝ್ರತ್ ಮುಆಧ್ ಬಿನ್ ಜಬಲ್(ರ) ಮೃತಪಟ್ಟರು. ಹಝ್ರತ್ ಮುಆಧ್(ರ) ತನ್ನ ಪ್ರತಿನಿಧಿಯಾಗಿ ಹಝ್ರತ್ ಅಮ್ರ್ ಬಿನ್ ಆಸ್(ರ)ರನ್ನು ನಿಶ್ಚಯಿಸಿದ್ದರು. ಹಝ್ರತ್ ಅಮ್ರ್ ಬಿನ್ ಆಸ್(ರ) ಜನರೊಡನೆ ಹೇಳಿದರು: ಪರ್ವತಗಳಲ್ಲಿ ಅಡಗಿಕೊಂಡು ತಮ್ಮ ಜೀವಗಳನ್ನು ರಕ್ಷಿಸಿರಿ. ಈ ರೀತಿಯಾಗಿ ಪ್ಲೇಗ್ ರೋಗವು ಮೆಲ್ಲಮೆಲ್ಲನೆ ಕಡಿಮೆಯಾಗಿ ಕೊನೆಗೊಂಡಿತು. ಈ ಸುದ್ದಿ ಹಝ್ರತ್ ಉಮರ್‌ರಿಗೆ ಲಭಿಸಿದಾಗ ಅವರು ಅದನ್ನು ಬಹಳ ಇಷ್ಟಪಟ್ಟರು.

ಹಝ್ರತ್ ಅಬೂಉಬೈದ(ರ) ಅಲ್ಲದೇ ಹಝ್ರತ್ ಮುಆಧ್ ಬಿನ್ ಜಬಲ್(ರ), ಹಝ್ರತ್ ಯಝೀದ್ ಬಿನ್ ಅಬೂಸುಫ್‌ಯಾನ್(ರ), ಹಝ್ರತ್ ಹಾರಿಸ್ ಬಿನ್ ಹಿಶಾಂ(ರ), ಹಝ್ರತ್ ಸುಹೈಲ್ ಬಿನ್ ಅಮ್ರ್(ರ), ಹಝ್ರತ್ ಉತ್ಬ ಬಿನ್ ಸುಹೈಲ್(ರ) ಮತ್ತು ಇತರ ಶ್ರೇಷ್ಠ ಸಹಾಬರು ಕೂಡ ಈ ಮಾರಕ ರೋಗದಿಂದ ಮೃತಪಟ್ಟರು.

ಹಝ್ರತ್ ಉಮರ್(ರ)ರ ದುಆ ಸ್ವೀಕಾರದ ಘಟನೆಗಳಲ್ಲಿ ಒಂದು ಪ್ರಸ್ತಾಪ ಹೀಗೆ ಲಭಿಸುತ್ತದೆ. ಒಂದು ಬಾರಿ ಕಠಿಣವಾದ ಬರಗಾಲ ಉಂಟಾದಾಗ ಅವರು ಇಸ್ತಿಸ್‌ಖಾ ನಮಾಝನ್ನು (ಮಳೆಗಾಗಿ ಮಾಡಲಾಗುವ ನಮಾಝ್) ನಿರ್ವಹಿಸುತ್ತಾ ಅಲ್ಲಾಹನೊಡನೆ ದುಆ ಮಾಡಿದಾಗ ತಕ್ಷಣವೇ ಮಳೆ ಸುರಿಯಿತು. ಇಸ್ಲಾಂ ಧರ್ಮವು ಈಜಿಪ್ಟಿಗೆ ತಲುಪುವುದಕ್ಕೆ ಮುಂಚೆ ಅಲ್ಲಿಯ ಜನರಲ್ಲಿ ಒಂದು ಸಂಪ್ರದಾಯವಿತ್ತು. ಅದೇನೆಂದರೆ, ನೈಲ್ ನದಿ ಬತ್ತಿಹೋಗುವಾಗ ಅವರು ಒಬ್ಬಳು ಯುವತಿಯನ್ನು ಅಲಂಕರಿಸಿ ಸುಂದರಗೊಳಿಸಿ ನದಿಗೆ ದೂಡುತ್ತಿದ್ದರು. ಅಲ್ಲಿ ಇಸ್ಲಾಂ ಧರ್ಮದ ಆಗಮನವಾದಾಗ ಹಝ್ರತ್ ಉಮರ್(ರ) ದುಆ ಮಾಡಿ ಒಂದು ಚೀಟಿಯನ್ನು ಕಳುಹಿಸಿದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: "ಎಲೈ ನೈಲ್ ನದಿ, ನಿನ್ನನ್ನು ಅಲ್ಲಾಹನು ಹರಿಸುತ್ತಿದ್ದಾನೆ ಎಂದಾದರೆ, ಅವನು ನಿನ್ನನ್ನು ಹರಿಸಲಿ ಎಂದು ನಾನು ದುಆ

ಮಾಡುತ್ತೇನೆ.” ಹಝ್ರತ್ ಉಮರ್(ರ)ರ ಆದೇಶದ ಮೇರೆಗೆ ಆ ಚೀಟಿಯನ್ನು ನದಿಗೆ ಹಾಕಲಾದಾಗ ನದಿ ಹರಿಯಲು ಶುರುವಾಯಿತು.

ಇಸ್ಲಾಮಿನ ಸೈನ್ಯದೊಂದಿಗೆ ಹಝ್ರತ್ ಸಾರಿಯ(ರ) ಸಂಕಷ್ಟಕ್ಕೆ ಗುರಿಯಾದಾಗ ಮದೀನದಲ್ಲಿದ್ದ ಹಝ್ರತ್ ಉಮರ್(ರ)ರ ನಾಲಗೆಯಿಂದ **“ಯಾ ಸಾರಿಯತುಲ್ ಜಬಲ್”** ಎಂಬ ಮಾತು ಹೊರಟಿತು. ಎಂದರೆ ಎಲೈ ಸಾರಿಯ, ಪರ್ವತದ ಕಡೆಗೆ ನೋಡು. ಈ ಮಾತು ಯುದ್ಧ ಮೈದಾನದಲ್ಲಿದ್ದ ಹಝ್ರತ್ ಸಾರಿಯ(ರ)ರಿಗೆ ಕೇಳಿಸಿತು. ಹೀಗೆ ಮುಸ್ಲಿಮರು ದೊಡ್ಡದಾದ ಆಪತ್ತಿನಿಂದ ಸುರಕ್ಷಿತರಾದರು. ಒಂದು ಬಾರಿ ರೋಮಿನ ಚಕ್ರವರ್ತಿಗೆ ತೀವ್ರವಾದ ತಲೆನೋವು ಉಂಟಾಯಿತು. ಅದು ಸಾವಿರಾರು ಚಿಕಿತ್ಸೆಗಳಿಂದಲೂ ಗುಣವಾಗುತ್ತಿರಲಿಲ್ಲ. ಕೊನೆಗೆ ಹಝ್ರತ್ ಉಮರ್(ರ)ರ ಹಳೆಯ, ಬಣ್ಣಗುಂದಿದ ಟೋಪಿಯನ್ನು ಧರಿಸಿದ ಕಾರಣದಿಂದ ಅಲ್ಲಾಹನು ಅರಸನಿಗೆ ಶಮನ ನೀಡಿದನು.

ಹಝ್ರತ್ ಉಮರ್(ರ) ಹೀಗೆ ದುಆ ಮಾಡುತ್ತಿದ್ದರು: ಹೇ ಅಲ್ಲಾಹ್, ನನಗೆ ಸಜ್ಜನರೊಂದಿಗೆ ಮರಣವನ್ನು ನೀಡು. ನನ್ನನ್ನು ಬೆಂಕಿಯ ಶಿಕ್ಷೆಯಿಂದ ರಕ್ಷಿಸು. ಹೇ ಅಲ್ಲಾಹ್, ನನಗೆ ಹೆಚ್ಚು ವಯಸ್ಸಾಗಿದೆ ಮತ್ತು ನನ್ನ ಶಕ್ತಿ ಕಡಿಮೆಯಾಗಿದೆ. ನನ್ನ ಪ್ರಜೆಗಳು ಎಲ್ಲ ಕಡೆ ಹರಡಿವೆ. ನೀನು ನನ್ನನ್ನು ವ್ಯರ್ಥಗೊಳಿಸದೇ ನನಗೆ ಮರಣವನ್ನು ನೀಡು. ಹಝ್ರತ್ ಉಮರ್(ರ)ರಿಗೆ ಹಝ್ರತ್ ಪೈಗಂಬರ್(ಸ) ಈ ದುಆವನ್ನು ಕಲಿಸಿದ್ದರು: “ಹೇ ಅಲ್ಲಾಹ್, ನನ್ನ ಅಂತರಂಗವನ್ನು ನನ್ನ ಬಹಿರಂಗಕ್ಕಿಂತ ಉತ್ತಮಗೊಳಿಸು ಮತ್ತು ನನ್ನ ಬಾಹ್ಯವನ್ನು ಉತ್ತಮಗೊಳಿಸು.”

ಹಝ್ರತ್ ಇಬ್ನು ಉಮರ್‌ರಿಂದ ಹೀಗೆ ವರದಿಯಾಗಿದೆ: ಬರಗಾಲದ ದಿನಗಳಲ್ಲಿ ಹಝ್ರತ್ ಉಮರ್(ರ) ಒಂದು ಹೊಸ ಕೆಲಸವನ್ನು ಮಾಡಿದರು. ಅದನ್ನು ಅವರು ಮೊದಲು ಮಾಡುತ್ತಿರಲಿಲ್ಲ. ಅದೇನೆಂದರೆ, ಜನರಿಗಾಗಿ ಇಶಾ ನಮಾಝಿನ ಇಮಾಮತ್ ವಹಿಸಿದ ನಂತರ ಅವರು ತನ್ನ ಮನೆಗೆ ಹೋಗಿ ರಾತ್ರಿ ಪೂರ್ತಿ ನಿರಂತರವಾಗಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಹೊರಗೆ ಬಂದು ಮದೀನದ ಸುತ್ತಾ ಸುತ್ತುತ್ತಿದ್ದರು. ಒಂದು ರಾತ್ರಿ ಸಹರಿಯ ಸಮಯದಲ್ಲಿ ಅವರು ಹೀಗೆ ಹೇಳುವುದನ್ನು ನಾನು ಆಲಿಸಿದೆನು: **ಅಲ್ಲಾಹುಮ್ಮ ಲಾ ತಜ್‌ಅಲ್ ಹಲಾಕ ಉಮ್ಮತ ಮುಹಮ್ಮದಿನ್ ಅಲಾ ಯದೀ**. ಎಂದರೆ, ಹೇ ಅಲ್ಲಾಹ್, ನನ್ನ ಕೈಗಳಿಂದ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯವನ್ನು ನಾಶಕ್ಕೆ ನೂಕಬೇಡ.

ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ)ರ ರೀತಿ ಹೇಗಿತ್ತೆಂದರೆ, ನಮಾಝಿನ ಪಂಕ್ತಿಗಳನ್ನು ಸರಿಪಡಿಸಲು ಅವರು ಒಬ್ಬ ವ್ಯಕ್ತಿಯನ್ನು ನಿಶ್ಚಯಿಸಿದ್ದರು. ನಮಾಝಿಗಾಗಿ ಇಖಾಮತ್ ಕೊಡಲಾಗುವಾಗ ಅವರು ಜನರ ಕಡೆಗೆ ಮುಖಮಾಡಿ ಪಂಕ್ತಿಗಳನ್ನು ಸರಿಪಡಿಸುತ್ತಿದ್ದರು ಮತ್ತು ಪಂಕ್ತಿಗಳನ್ನು ಸರಿಪಡಿಸಲು ಹೇಳುತ್ತಿದ್ದರು. ಪಂಕ್ತಿಗಳು ನೇರವಾದ ನಂತರ ಅವರು ಖಿಬ್ಲದ ಕಡೆಗೆ ಮುಖ ಮಾಡಿ ಅಲ್ಲಾಹು ಅಕ್ಬರ್ ಎಂದು ಹೇಳಿ ನಮಾಝ್ ಪ್ರಾರಂಭಿಸುತ್ತಿದ್ದರು.

ಹಝ್ರತ್ ಉಮರ್(ರ) ಅಲ್ಲಾಹನ ಮಾರ್ಗದಲ್ಲಿ ಬಹಳವಾಗಿ ಖರ್ಚು ಮಾಡುವವರಾಗಿದ್ದರು. ಅವರ ದೇವಭಯದ ಸ್ಥಿತಿಯೇನಾಗಿತ್ತು ಎಂದರೆ, ಮರಣಾಸನ್ನರಾದಾಗ ಅವರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ಅವರು ಹೀಗೆ ಹೇಳುತ್ತಿದ್ದರು: ನಾನು ಯಾವುದೇ ಪ್ರತಿಫಲಕ್ಕೆ ಅರ್ಹನಲ್ಲ. ನಾನು ಕೇವಲ ಶಿಕ್ಷೆಯಿಂದ ಪಾರಾಗುವುದರ ಬಗ್ಗೆ ಚಿಂತಿಸುತ್ತಿದ್ದೇನೆ.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಈಗ ಸ್ವಲ್ಪ ಸಂಗತಿಗಳು ಬಾಕಿಯಿವೆ. ಅದು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّا اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاۤءِ ذِي الْقُرْبٰى
وَيَنْهٰى عَنِ الْفَحْشَاۤءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
*At, Masjid Mubarak, Islamabad, Tilford, UK, On 19-11-2021*
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon